ಬಂದು ಮೂವರೆಂಡ್ರೂ ಗಲಾಟೆ ಮಾಡ್ತಾರಂತೆ. ಅವ್ರುಂದೂ ಒಂದು ಜನ್ಮಾನೆ ತಕೋ ಅತ್ತ...'' ಎಂದು ಸಮಾಧಾನವಾಗಿಯೇ ಉತ್ತರಿಸುತ್ತಿದ್ದನು. ಐದು ವರ್ಷ ತುಂಬಿದಾಗ ಬುಡೇನನ್ನು ಸ್ಕೂಲಿಗೆ ಸೇರಿಸುವಾಗ ಪ್ರೈಮರಿ ಸ್ಕೂಲ್ ಹೆಡ್ ಮಾಸ್ಟರ್ ರುದ್ರಯ್ಯನವರು, ''ಸಾಬ್ರು ಮಕ್ಳನ್ನ ಸ್ಕೂಲ್ಗೆ ಸೇರಿಸೋದೇ ಅಪರೂಪ, ಅಂಥದ್ರಲ್ಲಿ ನಿನ್ನ ಮೆಚ್ಕೊಬೇಕು ಫಕೀರಪ್ಪ...'' ಎಂದು ತಾರಿಫು ಮಾಡಿದ್ದರು. ''ನಂದೇನೈತೆ ಸಾ. ಎಲ್ಲಾ ನಮ್ಮ ಬೂಬಮ್ಮಂದು. ಅದೇನೋ ಹೇಳ್ತಾರಲ್ಲ, ಅಕ್ಷರ ಕಲ್ತೋನಿಗಿಂತ್ಲೂ ಅಗುಸ್ರೋನೆ ಮೇಲು ಅಂತ. ನನ್ನ ಭಾವಣ್ಣೇನೂ ಅದೆ. ಆದ್ರೆ ನಮ್ಮ ಬೂಬಿಜಾನ್‌ಗೆ ಮೊಮ್ಮಗನ್ನ ದಫೇದಾರನ ವೇಷದಲ್ಲಿ ನೋಡ್ಬೇಕೆಂಬೋ ಆಸೆನಂತೆ.'' ಎಂದಾಗ ಮೇಷ್ಟ್ರು ಮುಖವನ್ನು ಹುಳಿಹುಳಿ ಮಾಡಿಕೊಂಡಿದ್ದರು.

ಬುಡೇನ್ ಸ್ಕೂಲಿಗೆ ಹೋಗಲು ಪ್ರತಿನಿತ್ಯವೂ ಮಂಡಿಗೆ ಬೀಳುತ್ತಿದ್ದ. ಆದರೆ ಬೂಬಿಜಾನ್ ಮೊಮ್ಮಗನ ಜೇಬಿಗೆ ಪಾಕಂಪಪ್ಪು, ಕಡ್ಲೆ ಬೀಜ, ಹುರಿಗಾಳು ತುಂಬಿ ಪೂಸಿ ಹೊಡೆದು ಸ್ಕೂಲಿಗೆ ಸಾಗಾಕುತ್ತಿದ್ದಳು. ಇದೇ ಟೈಮಿನಲ್ಲಿ ಫಕೀರಪ್ಪನು ಒಂದು ಸೆಕೆಂಡ್ ಹ್ಯಾಂಡ್ ಸುವೇಗಾ ಗಾಡಿಯನ್ನು ಖರೀದಿಸಿ ಹೊಗೆಸೊಪ್ಪು, ಕಡ್ಡಿಪುಡಿ ಚೀಲಗಳನ್ನು ಸುವೇಗಾದ ಮೇಲಿಟ್ಟುಕೊಂಡು ಬುರ್ರ ಬುರ್ರಾ ಅಂತ ಊರುಗಳನ್ನು ಸುತ್ತತೊಡಗಿದ. ''ಸುವೇಗಾ ತಗೊಂಡಿದ್ದು ಒಳ್ಳೆದಾಯ್ತೇಳು ಫಕೀರಪ್ಪ ಅತ್ತ, ಟೈಮಿಗೆ ಸರಿಯಾಗಿ ಎಲ್ಲಾ ಊರುಗುಳ್ನೂ ಪಿಕಪ್ ಮಾಡ್ತೋದು...'' ಎಂದು ಕೆಲವು ಹಳ್ಳಿಗಳ ಚಿಲ್ಲರೆ ಅಂಗಡಿಯವರು ತಾರಿಫು ಮಾಡುತ್ತಿದ್ದರು. ಟೈಮಿದ್ದಾಗ ಮಗ ಬುಡೇನ್ ಸಾಬನನ್ನೂ ಸುವೇಗಾದಲ್ಲಿ ಕೂರಿಸಿಕೊಂಡು ಊರಿನಲ್ಲಿ ಒಂದು ರೌಂಡ್ ಮೆರೆದಾಡಿಸಿಕೊಂಡು ಬರುತ್ತಿದ್ದ. ''ಮಗ ಹುಟ್ಟಿದ್ಮೇಲಂತೂ ಫಕೀರಪ್ಪನ ನಸೀಬೇ ಬದ್ಲಾಗೋಯ್ತು. ಯಾಪಾರ್ದಾಗೆ ಒಳ್ಳೆ ಇಂಪ್ರೂಮೆಂಟ್ ಆಗೋದ...'' ಎಂದು ನೆಂಟರಿಷ್ಟರು ಒಳೊಳಗೆ ಹೊಟ್ಟೆ ಉರಿಸಿಕೊಳ್ಳುತ್ತಿದ್ದರು. ಇಂಥ ಏಳಿಗೆಯಲ್ಲಿರುವಾಗಲೇ ಫಕೀರಪ್ಪನ ಬಾಳಿನಲ್ಲಿ ಒಂದು ಘನಘೋರ ದುರಂತವೊಂದು ನಡೆದುಹೋಯಿತು. ಒಂದು ದಿನ ಕೋಟಾಲದಿನ್ನೆ ಸಂತೆಗೆಂದು ಸುವೇಗಾದ ಹ್ಯಾಂಡಲ್ ಮೇಲೆ ಹೊಗೆಸೊಪ್ಪು, ಕಡ್ಡಿಪುಡಿ ಚೀಲ ಒರಗಿಸಿಕೊಂಡು, ಹಿಂದೆ ಹೆಂಡತಿ ಫಾತಿಮಾ ಬೇಗಂಳನ್ನು ಕೂರಿಸಿಕೊಂಡು ಹೋಗುತ್ತಿರಬೇಕಾದರೆ ಅರಸಾಪುರದ ಕ್ರಾಸಿನಲ್ಲಿ ಜೋರಾಗಿ ಬಂದ ಕಲ್ಯಾಣಿ ಬಸ್ ಬಡಿದು ಇಬ್ಬರೂ ಸ್ಪಾಟ್ ಔಟ್ ಆಗಿದ್ದರು. ಫಕೀರಪ್ಪನ ಸಾವಿನ ಸುದ್ದಿ ಎಲ್ಲಾ ಊರುಗಳಿಗೂ ಗೊತ್ತಾಗಿ ಹೊಗೆಸೊಪ್ಪು, ಕಡ್ಡಿಪುಡಿ ಅಗಿಯುತ್ತಿದ್ದ ಬಾಯಿಗಳು ಬಣಬಣಗುಟ್ಟಿದ್ದವು.

ಫಕೀರಪ್ಪನ ಸಾವು ಅತ್ಯಂತವಾಗಿ ಕಂಗೆಡಿಸಿದ್ದು ತಾಯಿ ಬೂಬಿಜಾನಳನ್ನು. ಮೊಮ್ಮಗ ಬುಡೇನನ್ನು ಬಿಟ್ಟರೆ ಬೂಬಮ್ಮನಿಗೆ ಮಗ ಫಕೀರಪ್ಪನು ಮತ್ಯಾವ ಆಸ್ತಿಪಾಸ್ತಿಯನ್ನೂ ಉಳಿಸಿ ಹೋಗಿರಲಿಲ್ಲ. ಇದ್ದ ಹಳೆಯ ಸಣ್ಣ ಮನೆಯೂ ತನ್ನದಾಗಿರಲಿಲ್ಲ. ಅಲ್ಲಾನ ದಯೆಯಿಂದ ಬೂಬಮ್ಮ ಹರಿದ ಬಟ್ಟೆಗಳಿಗೆ ತೇಪೆ ಹಾಕುವ ಕೆಲಸದಲ್ಲಿ ಅಪರಿಮಿತವಾದ ಪರಿಣತಿಯನ್ನು ಪಡೆದಿದ್ದಳು. ಫಕೀರಪ್ಪನ ಸಾವನ್ನು ಮರೆತು ಮೊಮ್ಮಗ ಬುಡೇನ್ ಸಾಬನನ್ನು ಜೊತೆಗಾಕಿಕೊಂಡು ಸುತ್ತಮುತ್ತಲಿನ ಊರುಗಳಲ್ಲಿ ಬಟ್ಟೆಗಳಿಗೆ ತೇಪೆ ಹಾಕುತ್ತಾ ಜೀವನ ನಡೆಸತೊಡಗಿದಳು. ಬುಡೇನ್ ಸಾಬನು ಸ್ಕೂಲಿಗೆ ಹೋಗುವುದನ್ನು ಬಿಟ್ಟು ಅಜ್ಜಿ ಬೂಬಮ್ಮಳ ಸೆರಗು ಹಿಡಿದುಕೊಂಡು ಊರೂರು ಸುತ್ತುತ್ತಾ ಖುಷಿಯಿಂದ ಇರತೊಡಗಿದ. ಬುಡೇನ್ ಸಾಬನು ಬೆಳೆಯುತ್ತಾ ಅನೇಕ ವಿದ್ಯೆಗಳನ್ನು ಸಲೀಸಾಗಿ ತನ್ನದಾಗಿಸಿಕೊಳ್ಳುವ ಕಲೆಯನ್ನು ಕರಗತಮಾಡಿಕೊಂಡ. ಗೊರವಯ್ಯನ ವೇಷ ಧರಿಸುವುದು, ಬುಡುಬುಡುಕೆ ಅಲ್ಲಾಡಿಸುವುದು, ಕೋತಿ ಆಡಿಸುವುದು, ಕೀಲುಗೊಂಬೆ ಆಡಿಸುವುದು, ಕುರುಕುರುತೋಕೆ ಕೊಂಡರಾಮನ ವೇಷ ಹಾಕುವುದು, ಮಂಡರಂತೆ ಕತ್ತಿಯಿಂದ ಕೈ ಕೊಯ್ದುಕೊಳ್ಳುವುದು ಮುಂತಾದವುಗಳನ್ನು ನೀರು ಕುಡಿದಷ್ಟೇ ಸುಲಭವಾಗಿ ಮಾಡುತ್ತಿದ್ದ. ''ವೆಂಕಟ್ರೋಣ ಸ್ವಾಮಿ ಪಾದುವೇ ಗತಿ ಗೋವಿಂದಾ